**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>**

**<u>ಹಿರೇಕೆರೂರು.</u>**

**<u>ಸಿ.ಸಿ.ನಂಬರ್ಃ240/2019</u>**

ಸಿಡಬ್ಲ್ಯೂಃ1

ಪಿಡಬ್ಲ್ಯೂಃ1

| | | |
|---|---|---|
| ಸಾಕ್ಷಿಯ ಹೆಸರು | : | ಹನಮಂತರಾಯ ವಜ್ರಮಟ್ಟಿ |
| ತಂದೆಯ ಹೆಸರು | : | ಸದಾಶಿವ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಅಬಕಾರಿ ಅಧೀಕ್ಷಕರು |
| ವಾಸಸ್ಥಳ | : | ಕಲಬುರ್ಗಿ |

ಇಂದು ದಿನಾಂಕಃ 31.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

ನಾನು ಜೂನ್ 2018 ರಿಂದ ಜುಲೈ 2019 ರವರೆಗೆ ರಾಣೆಬೆನ್ನೂರು ಅಬಕಾರಿ ಉಪ ವಿಬಾಗದಲ್ಲಿ ಅಬಕಾರಿ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿನಾಂಕ 13-03-2019 ರಂದು ಬೆಳಿಗ್ಗೆ 6.30 ಗಂಟೆಯ ಸಮಯಕ್ಕೆ ನಾನು ರಾಣೇಬೆನ್ನೂರಿನ ಕಚೇರಿಯಲ್ಲಿರುವಾಗ ಹಿರೇಕೆರೂರು ತಾಲೂಕಿನ ಬಾವಾಪುರ ತಾಂಡದಲ್ಲಿ ಕಳ್ಳಬಟ್ಟಿ ಸಾರಾಯಿ ಹಾಗೂ ತಯಾರಿಸುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಅದರಂತೆ ನಾನು ನಮ್ಮ ಸಿಬ್ಬಂದಿಯವರಿಗೆ ತಿಳಿಸಿ, ಚಾಸಾ-4 ರವರ ಮೂಲಕ ಚಾಸಾ-2 ಮತ್ತು 3 ರವರನ್ನು ಕಚೇರಿಗೆ ಕರೆಯಿಸಿಕೊಂಡು ವಿಷಯವನ್ನು ತಿಳಿಸಿ, ಅವರು ಒಪ್ಪಿದ ಮೇರೆಗೆ ಅವರನ್ನು ಕರೆದುಕೊಂಡು 6.45 ಗಂಟೆಗೆ ಕಚೇರಿಯಿಂದ ಹೊರಟು, ಬೆಳಿಗ್ಗೆ 7.15 ಗಂಟೆಯ ಸಮಯಕ್ಕೆ ಬಾವಾಪುರ ತಾಂಡವನ್ನು ತಲುಪಿರುತ್ತೇವೆ. ನಂತರ 15 ನಿಮಿಷಗಳ ಕಾಲ ಅಲ್ಲಿ ಗಸ್ತು ಕರ್ತವ್ಯವನ್ನು ಮಾಡಿ 7.30 ಗಂಟೆಯ ಸಮಯಕ್ಕೆ ಒಂದು ಮನೆಯ ಮುಂದೆ ಒಬ್ಬ ವ್ಯಕ್ತಿ ನಿಂತು ಕೊಂಡಿದ್ದು ನಂತರ ನಮ್ಮನ್ನು ನೋಡಿ ಮನೆಯ ಒಳಗೆ ಓಡಿ ಹೋಗಿರುತ್ತಾರೆ. ನಂತರ ನಾವು ಆತನನ್ನು ಹಿಡಿಯ ಹೋಗಿದ್ದು ಆತ ತನ್ನ ಮನೆಯ ಹಿಂಬಾಗಿಲಿನಿಂದ ಪರಾರಿಯಾಗಿರುತ್ತಾರೆ. ನಂತರ ಸದರಿ ಮನೆಯನ್ನು ಶೋದನೆ ಮಾಡಲಾಗಿ ಅಡುಗೆ ಮನೆಯಲ್ಲಿ 30 ಲೀಟರ್ ಅಳತೆಯ ಒಂದು ಸ್ಟೀಲ್ ಪಾತ್ರೆಯಲ್ಲಿ ಅಂದಾಜು 20 ಲೀಟರ್ ಬೆಲ್ಲದ ಕೊಳೆ ಹಾಗೂ 2 ಲೀ ಅಳತೆಯ ಒಂದು ಪ್ಲಾಸ್ಟಿಕ್ ಬಾಟಲ್ ನಲ್ಲಿ 2 ಲೀ ಕಳ್ಳಬಟ್ಟಿ ಸಾರಾಯಿ ಇದಿದ್ದು, ನಂತರ 1 ಲೀ ಅಳತೆಯ ಒಂದು ಬಾಟಲ್ ನಲ್ಲಿ 1 ಲೀ ಕಳ್ಳಬಟ್ಟಿ ಸಾರಾಯಿ ಹಾಗೂ 10 ಲೀ ಅಳತೆಯ ಅಲ್ಯೂಮೀನಿಯಂ ಪಾತ್ರೆಗೆ ಜೋಡಿಸಿದ ಕಪ್ಪು ಬಣ್ಣದ ಪ್ಲಾಸ್ಟಿಕ್

ಪೈಪ್, ನಂತರ ಆರೋಪಿಯ ಆದಾರ ಕಾರ್ಡ ಹಾಗೂ ರೇಶನ್ ಕಾರ್ಡ ನಕಲು ನಮಗೆ ಸಿಕ್ಕಿರುತ್ತದೆ. ನಂತರ ಅವುಗಳನ್ನು ಪಂಚರ ಸಮಕ್ಷಮದಲ್ಲಿ ಜಪ್ತು ಪಡಿಸಿಕೊಂಡು, 1 ಲೀ ನಷ್ಟು ಬೆಲ್ಲದ ಕೊಳೆಯನ್ನು ಹಾಗೂ 2 ಬಾಟಲ್ ನಿಂದ ತಲಾ 180 ಎಂ ಎಲ್ ನಷ್ಟು ಕಳ್ಳಬಟ್ಟಿ ಸಾರಾಯಿಯನ್ನು ರಸಾಯನಿಕ ಪರೀಕ್ಷಗಾಗಿ ಬೇರ್ಪಡಿಸಿ ಅವುಗಳಿಗೆ ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಚೀಟಿಯನ್ನು ಅಂಟಿಸಿ ನಾನು ಮತ್ತು ಪಂಚರ ಸಹಿ ಹಾಕಿ ಅವುಗಳಿಗೆ ನಮ್ಮ ಠಾಣಾ ಮಾದರಿ ಶೀಲ್ ನ್ನು ಹಾಕಿರುತ್ತೇವೆ. ನಂತರ ಆ ಸಮಯದಲ್ಲಿ ಬೆಳಿಗ್ಗೆ 8.15 ರಿಂದ 9.15 ರವೆರೆಗೆ ಪಂಚನಾಮೆಯವನ್ನು ಮಾಡಿರುತ್ತೇವೆ. ನಂತರ ಅಕ್ಕ ಪಕ್ಕದವರ ಬಳಿ ವಿಚಾರಿಸಿ ಆರೋಪಿ ಹೆಸರು ಮತ್ತು ವಿಳಾಸವನ್ನು ಪಡೆದುಕೊಂಡಿರುತ್ತೇವೆ. ನಂತರ ಕಚೇರಿಗೆ ವಾಪಸಾಗಿ ಸರ್ಕಾರಿ ತರ್ಫೆ ದೂರನ್ನು ತಯಾರಿಸಿ ಅಪರಾಧಿಕ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನವನ್ನು ತಯಾರಿ ಮಾನ್ಯ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ. ಮುದ್ದೆ ಮಾಲುಗಳನ್ನು ನಮ್ಮ ವಶದಲ್ಲಿ ಇಟ್ಟುಕೊಳ್ಳಲು ಪ್ರಾಧಿಕೃತ ಅಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಶೋಧನಾ ವಾರೆಂಟನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸರ್ಕಾರಿ ತರ್ಫೆ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಶೀಲ್ ನ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಾಧಿಕೃತ ಅಧಿಕಾರಿಗಳಿಂದ ಪಡೆದ ಅನುಮತಿ ಪತ್ರದಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ರಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿದ ಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎಸ್ ಬಿ ಟಿ ವಕೀಲರಿಂದಃ

ಆರೋಪಿಯನ್ನು ನಾನು ಘಟನೆ ನಡೆದ ದಿನದಂದು ನೋಡಿರುತ್ತೇನೆ. ನಾವು ಪಂಚರಿಗೆ ಲಿಖಿತವಾಗಿ ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ನಾನು ವಶಪಡಿಸಿಕೊಂಡಂತಹ ವಸ್ತುಗಳನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ನಾನು ವಶಪಡಿಸಿಕೊಂಡಂತಹ ಎಲ್ಲಾ ವಸ್ತುಗಳು ಈ ದಿನ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ನಾವು ದೂರು ನೀಡಿದ ನಂತರವೇ ನಮಗೆ ಅಪರಾಧಿಕ

ಸಂಖ್ಯೆ ಗೊತ್ತಾಗುತ್ತದೆ ಎಂದರೆ ಸರಿ. ಆ ದಿನದಂದು ಪಂಚರು ಎಷ್ಟು ಸಹಿಗಳನ್ನು ಮಾಡಿದರು ಎಂದು ನನಗೆ ನೆನಪಿರುವುದಿಲ್ಲ. ಮುದ್ದೆ ಮಾಲು-1 ರಿಂದ 3 ರ ಮೇಲಿನ ಚೀಟಿಯನ್ನು ನಾನೇ ಬರೆದಿರುತ್ತೇನೆ. ಆದರೆ ನಾನು ಠಾಣ ಅಪರಾಧಿಕ ಸಂಖ್ಯೆಯನ್ನು ಬರೆದಿರುವುದಿಲ್ಲ ಅದನ್ನು ರಸಾಯನೀಕ ಇಲಾಖೆಯವರು ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ಮುದ್ದೆ ಮಾಲು-1 ರ ಮೇಲೆ ನನ್ನ ಸಹಿ ಇರುತ್ತದೆ. ನಾನು ಸಹಿ ಮಾಡಿದ ಪೆನ್ ಶಾಹಿ ಹಾಗೂ ಅದರಲ್ಲಿ ಬರೆದಿರುವ ಅಕ್ಷರಗಳ ಸಹಿ ಒಂದೆ ಇದೆ ಎಂದರೆ ಸರಿಯಲ್ಲ. ಮುದ್ದೆ ಮಾಲು-2 ರಲ್ಲಿನ ಚೀಟಿಯನ್ನು ನಾನೇ ಬರೆದಿರುತ್ತೇನೆ.

2. ಬಾವಾಪುರ ಗ್ರಾಮದಲ್ಲಿ ಯಾವ ಭಾಗದಲ್ಲಿ ಹಾಗೂ ಎಷ್ಟು ಕ್ರಾಸ್ ಹಾಗೂ ಯಾವ ದಿಕ್ಕಿಗೆ ಆರೋಪಿಯ ಮನೆ ಬರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಆರೋಪಿಯನ್ನು ಹಿಡಿಯಲು ಮೊದಲು ಚಾಸಾ-4 ರವರು ಹೋಗಿರುತ್ತಾರೆ. ಆತನನ್ನು ಹಿಡಿಯಲು ಅಂದಾಜು 100 ಮೀಟರ್ ನಷ್ಟು ದೂರ ಓಡಿ ಹೋಗಿರುತ್ತೇವೆ. ಆರೋಪಿ ಯಾವ ದಿಕ್ಕಿಗೆ ಓಡಿ ಹೋಗಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ಕಚೇರಿಯ ಮೂಮೆಂಟ್ ರಿಜಿಸ್ಟರನಲ್ಲಿ ನಾನು ಗಸ್ತು ಕರ್ತವ್ಯಕ್ಕೆ ಹೋಗಿರುವ ಬಗ್ಗೆ ನಮೂದಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಚುನಾವಣೆ ಪ್ರಯುಕ್ತ ನಮ್ಮ ವಮೇಲಾಧಿಕಾರಿಗಳ ಮಾತು ಕೇಳಿ ಈ ಒಂದು ಸುಳುಳ ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಜಪ್ತಾದ ಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.